**ಸಾಕ್ಷಿಗೆ ದಿನಾಂಕ:17-06-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ. AA ವಕೀಲರಿಂದ ::**

ಈ ದಾವೆಯನ್ನು ಬರಗೆಹಳ್ಳಿ ಗ್ರಾಮದ ಸರ್ವೇ ನಂಬರ್ 54 ರಲ್ಲಿನ 1 ಎಕರೆ 2 ಗುಂಟೆ ಜಾಗಕ್ಕೆ ಸಂಬಂಧಪಟ್ಟಂತೆ ಹೂಡಿರುತ್ತೇನೆ. ನಿಪಿ1 ಕ್ರಯ ಪತ್ರದಲ್ಲಿ ಕೇವಲ 1 ಎಕರೆ ಜಾಗ ಕಂಡು ಬರುತ್ತದೆ ಎಂದರೆ ಸರಿ. ನಿಪಿ1 ಕ್ರಯ ಪತ್ರದ ನಂತರದಲ್ಲಿ ನನ್ನ ಜಮೀನಿನ ವಿಸ್ತೀರ್ಣ ವನ್ನು ಒಂದು ಎಕರೆ ಎಂದು ತಿದ್ದುಪಡಿ ಮಾಡಿಕೊಡಲು ನಾನು ಯಾವುದೇ ಕಚೇರಿಗೆ ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ. ನಿಪಿ1 ಕ್ರಯ ಪತ್ರವಾದ ನಂತರ ಕೈ ತಪ್ಪಿನಿಂದ ಪಹಣಿಯಲ್ಲಿ ನನ್ನ ಜಾಗದ ವಿಸ್ತೀರ್ಣ ಒಂದು ಎಕರೆ 2 ಗುಂಟೆ ಎಂದು ಕಂಡು ಬರುತ್ತಿದೆ ಎಂದರೆ ಸರಿ. ನಾನು ಹೆಚ್ಚುವರಿ ಎರಡು ಗುಂಟೆಯನ್ನು ಸೇರಿಸಿಕೊಂಡು ತಪ್ಪು ಚೆಕ್ಕುಬಂದಿಯನ್ನು ನೀಡಿ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಜಮೀನಿನ ಸ್ವಾಧೀನಕ್ಕೆ ಯಾವತ್ತು ಸಹ ಯಾವುದೇ ತಂಟೆ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪಹಣಿಯಲ್ಲಿ ನನಗೆ ಹೆಚ್ಚುವರಿ 2 ಗುಂಟೆ ಜಾಗವು ಯಾವ ಮೂಲದಿಂದ ಬಂದಿರುತ್ತದೆ ಎಂದು ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಹೆಚ್ಚುವರಿ ಜಮೀನಿನ ಸ್ವಾಧೀನದಲ್ಲಿ ನಾನು ಇಲ್ಲದಿದ್ದರೂ ಕೇವಲ ಪಹಣಿಯಲ್ಲಿ ಆಗಿರುವ ತಪ್ಪನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆದಕಾರಣ ನ್ಯಾಯಾಲಯದಿಂದ ಯಾವುದೇ ಪರಿಹಾರ ಪಡೆಯಲು ನಾನು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

Sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: